## 3 ನೇ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೈಸೂರು.

**ಸಿ.ಸಿ.ನಂಃ 10306/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಆರ್ ಮೋಹನ್ ಕುಮಾರ್ | ಪ್ರಾಸಾಃ 06 |
| ತಂದೆಯ ಹೆಸರು | ಃ | ಕೆ. ರಾಮು | ಚಾಸಾಃ 11 |
| ವಯಸ್ಸು | ಃ | 56 ವರ್ಷ | |
| ಉದ್ಯೋಗ | ಃ | ಪಿ ಎಸ್ ಐ, ಕುವೆಂಪು ನಗರ ಪಿ ಎಸ್ | |
| ವಾಸ | ಃ | ಮೈಸೂರು | ದಿಃ 17.02.2026 |

**ಸಾಕ್ಷಿಗೆ ಪ್ರಮಾಣವಚನವನ್ನು ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ನಾನು 2016 ರಿಂದ 2023 ರ ವರೆಗೆ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19.12.2021 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಕಾಮಾಕ್ಷಿ ಆಸ್ಪತ್ರೆಯಿಂದ ಎಂ ಎಲ್ ಸಿ ಮೆಮೋ ಬಂದಿದ್ದು, ಸದರಿ ಮೆಮೋ ಸ್ವೀಕರಿಸಿ ಕಾಮಾಕ್ಷಿ ಆಸ್ಪತ್ರೆಗೆ ಭೇಟಿ ನೀಡಿ ಕಾಮಾಕ್ಷಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆಯನ್ನು ಸಂಜೆ 6 ರಿಂದ 7 ರ ವರೆಗೆ ವೈದ್ಯರ ಸಮಕ್ಷಮ ದಾಖಲಿಸಿರುತ್ತೇನೆ. ನಂತರ ಪೊಲೀಸ್ ಠಾಣೆಗೆ ಸಂಜೆ 7.15 ರ ಸಮಯದಲ್ಲಿ ಬಂದು ಠಾಣಾ ಅಪರಾಧ ಸಂ.150/2021 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ.

ದಿಃ 20.12.2021 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ-2 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚರಾದ ಚಾಸಾ-5 ಮತ್ತು 6 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿ ಅವರನ್ನು ಸ್ಥಳಕ್ಕೆ ಬರಮಾಡಿಕೊಂಡು ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಗ್ಗೆ 10 ರಿಂದ 11 ರ ವರೆಗೆ ಸ್ಥಳ ಮಹಜರ್ ಕ್ರಮ ಜರುಗಿಸಿ ಒಂದು ರಕ್ತದ ಕಲೆ ಇರುವ ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮರದ ದೊಣ್ಣೆಯನ್ನು ಪಿ ಎಫ್ ನಂ. 130/2021 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 28.12.2021 ರಂದು ನಮ್ಮ ಠಾಣೆಯ WPC 954 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಯಿಂದ ರಕ್ತದ ಕಲೆಯಾಗಿರುವ ಒಂದು ಶರ್ಟ ಮತ್ತು ಪ್ಯಾಂಟನ್ನು ತಂದು ಹಾಜರುಪಡಿಸಿದ ಮೇರೆಗೆ ಸದರಿ ವಸ್ತ್ರಗಳನ್ನು ವಶಕ್ಕೆ ಪಡೆದು ಪಿ ಎಫ್ ನಂ. 135/2021 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 08.02.2022 ರಂದು WPC -640 ಚಾಸಾ-7 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-1 ರವರಿಗೆ ಸೇರಿದ ಹಲ್ಲನ್ನು ಆಸ್ಪತ್ರೆಯಿಂದ ತಂದು ಹಾಜರುಪಡಿಸಿದ ಮೇರೆಗೆ ಸದರಿ ಹಲ್ಲನ್ನು ವಶಕ್ಕೆ ಪಡೆದು ಪಿ ಎಫ್ ನಂ. 27/2022 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 18.02.2022 ರಂದು ಚಾಸಾ-1 ರವರು ದೃಶ್ಯಕ್ಕೆ ಸಂಬಂದಿಸಿದ ಡಿವಿಡಿಯನ್ನು ತಂದು ಹಾಜರುಪಡಿಸಿದ ಮೇರೆಗೆ ಸದರಿ ಡಿವಿಡಿಯನ್ನು ಅಮಾನತ್ತು ಮಹಜರ್ ಕ್ರಮ ಜರುಗಿಸುವ ಮೂಲಕ ಚಾಸಾ-5 ಮತ್ತು 6 ರವರ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಬೆಳಗ್ಗೆ 10 ರಿಂದ 11.00 ರ ವರೆಗೆ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡು ಪಿ ಎಫ್ ನಂ. 37/2022 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾಸಾ-1 ಮತ್ತು 2 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣಪತ್ರಗಳನ್ನು ಕಾಮಾಕ್ಷಿ ಆಸ್ಪತ್ರೆಯಿಂದ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಚಾಸಾ-2 ರಿಂದ 4, 7 ಮತ್ತು 8 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ಕಲಂ.324, 504, 506 ಐ ಪಿ ಸಿ ಅಡಿ ದಾಖಲಿಸಿದ್ದು, ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣಪತ್ರಗಳು ಹಾಗೂ Treatment summery ಪರಿಗಣಿಸಿ ಕಲಂ.324 ರ ಬದಲು ಕಲಂ. 326 ಐ ಪಿ ಸಿ ಅನ್ನು ಅಳವಡಿಸಿಕೊಂಡು ತನಿಖೆ ನಡೆಸಲು ನ್ಯಾಯಾಲಯಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿರುತ್ತೇನೆ.

ಈ ಪ್ರಕರಣದ ಆರೋಪಿಯನ್ನು ನಿಯಾಮಾನುಸಾರ ದಸ್ತಗಿರಿ ಮಾಡಿ ಸೂಕ್ತ ಬಂದೋಬಸ್ತಿನೊಂದಿಗೆ ನ್ಯಾಯಾಂಗ ಬಂಧನ ಕೋರಿ ನ್ಯಾಯಾಧೀಶರ ಮುಂದೆ ರಿಮಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಚಾಸಾ- 12 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ದಿಃ 19.12.2021 ರ ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ- 1 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ- 5 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ದಿಃ 18.02.2022 ರ ಅಮಾನತ್ತು ಮಹಜರ್ ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ- 2 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-7 ಎಂದು, ಸಾಕ್ಷಿಯ ಡಿಜಿಟಲ್ ಸಹಿಯನ್ನು ನಿಪಿ- 7 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಪಿ ಎಫ್ ನಂ.135/2021 ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–8 ಎಂದು, ಸಾಕ್ಷಿಯ 2 ಸಹಿಗಳನ್ನು ನಿಪಿ– 8 ಎ ಮತ್ತು 8 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಪಿ ಎಫ್ ನಂ.130/2021 ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–9 ಎಂದು, ಸಾಕ್ಷಿಯ 2 ಸಹಿಗಳನ್ನು ನಿಪಿ– 9 ಎ ಮತ್ತು 9 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಪಿ ಎಫ್ ನಂ.27/2022 ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ–6 ಎಂದು ಗುರುತಿಸಿದ್ದು, ಸಾಕ್ಷಿಯ 2 ಸಹಿಗಳನ್ನು ನಿಪಿ–6 ಬಿ ಮತ್ತು 6 ಸಿ ಎಂದು, ಗುರುತಿಸಲಾಯಿತು.

ಸಾಕ್ಷಿಯು ಪಿ ಎಫ್ ನಂ.37/2022 ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–10 ಎಂದು, ಸಾಕ್ಷಿಯ 2 ಸಹಿಗಳನ್ನು ನಿಪಿ– 10 ಎ ಮತ್ತು 10 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯು ದಿಃ17.02.2022 ರಂದು ಕಲಂ.326 ಐ ಪಿ ಸಿ ಅಡಿ ತನಿಖೆ ಕೈಗೊಳ್ಳಲು ಕೋರಿ ಸಲ್ಲಿಸಿರುವ ಮನವಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–11 ಎಂದು, ಸಾಕ್ಷಿಯ ಸಹಿಯನ್ನು ನಿಪಿ– 11 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ದಿಃ19.12.2021 ರ police intimation ಅನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–12 ಎಂದು, ಸಾಕ್ಷಿಯ ಸಹಿಯನ್ನು ನಿಪಿ– 12 ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ–1 ರವರ Admission Record, ಕೆ ಶೀಟ್‌ನ ದೃಢೀಕೃತ ದಾಖಲೆಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ–13 ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ–10 ರವರು ನೀಡಿರುವ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65 ಬಿ ರಡಿ ಸಲ್ಲಿಸಿರುವ ದೃಢೀಕರಣವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ–4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಮರದ ದೊಣ್ಣೆ, ರಕ್ತದ ಕಲೆ ಇರುವ ಶರ್ಟ ಮತ್ತು ಪ್ಯಾಂಟು, ಹಲ್ಲು ಮತ್ತು ಡಿವಿಡಿಯನ್ನು ನೋಡಿದರೇ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ಈಗಾಗಲೇ ಮುಮಾ–1 ರಿಂದ 5 ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃಃ ಆರೋಪಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ಆಸ್ಪತ್ರೆಯಲ್ಲಿ ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಪೂರ್ವದಲ್ಲಿ ವೈದ್ಯರಿಗೆ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಕುರಿತು ಯಾವುದೇ ಮನವಿ ಸಲ್ಲಿಸಿಲ್ಲ, ಮೌಖಿಕವಾಗಿ ತಿಳಿಸಿರುತ್ತೇನೆ. ಚಾಸಾ–1 ರವರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ಚಾಸಾ–9 ರವರು ಇದ್ದರು. ಹೇಳಿಕೆ ದಾಖಲಿಸಿಕೊಳ್ಳುವ ಸಮಯದಲ್ಲಿ ಚಾಸಾ–9 ರವರು ಇರಲಿಲ್ಲ ಎಂದರೆ ಸರಿಯಲ್ಲ. ವೈದ್ಯರು ಗಾಯಾಳು ಹೇಳಿಕೆ ನೀಡುವಷ್ಟು ಶಕ್ತನಾಗಿದ್ದಾನೆಂದು ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿ. ನಾನು ಚಾಸಾ–1 ರವರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ಆತನ ಹಲ್ಲಿಗೆ ಏಟು ಬಿದ್ದಿರುವ ಬಗ್ಗೆ

ಕಂಡುಬಂದಿರುವುದಿಲ್ಲ. ಕೃತ್ಯ ನಡೆಯಿತು ಎನ್ನಲಾದ ಸ್ಥಳ ರೆವೆನ್ಯೂ ಬಡಾವಣೆ ಎಂದರೆ ಸರಿ. ಸದರಿ ಸ್ಥಳದ ಅಕ್ಕ ಪಕ್ಕ ಸುಮಾರು ಮನೆಗಳು ಇವೆ ಎಂದರೆ ಸರಿ. ಕೃತ್ಯ ನಡೆಯಿತು ಎನ್ನಲಾದ ಸ್ಥಳದ ಅಕ್ಕ ಪಕ್ಕದ ನಿವಾಸಿಗಳನ್ನು ನಾನು ವಿಚಾರಣೆ ಮಾಡಿಲ್ಲ ಮತ್ತು ಅವರ ಹೇಳಿಕೆಗಳನ್ನು ದಾಖಲಿಸಿಲ್ಲ ಎಂದರೆ ಸರಿ. ಚಾಸಾ-5 ಮತ್ತು 6 ರವರು ಸ್ಥಳೀಯರಲ್ಲ ಎಂದರೆ ಸರಿ. ಚಾಸಾ-5 ಮತ್ತು 6 ರವರನ್ನು ಸ್ಥಳದಲ್ಲಿ ಹೋಗುತ್ತಿದ್ದವರನ್ನು ನಾನೇ ಕರೆದು ಪಂಚರಾಗಿ ಸಹಕರಿಸುವಂತೆ ತಿಳಿಸಿರುತ್ತೇನೆ. ನಾನು ಸ್ಥಳಕ್ಕೆ ಬೇಟಿ ಕೊಟ್ಟ ಸಮಯದಲ್ಲಿ ಜಗಳಕ್ಕೆ ಸಂಬಂಧಿಸಿದಂತೆ ರಕ್ತದ ಕಲೆಯಿರುವ ಯಾವುದೇ ಕುರುಹುಗಳು ಕಂಡುಬಂದಿರುವುದಿಲ್ಲ. ಚಾಸಾ-1 ರವರ ಮನೆಯಲ್ಲಿ ಸಿಸಿಟಿವಿ ಅಳವಡಿಸಿರುವುದು ಕಂಡುಬಂದಿರುತ್ತದೆ. ಚಾಸಾ-1 ರವರು ಗಾಯಾಳುವಾಗಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಅದೇ ದಿನ ಸಿಸಿಟಿವಿ ತುಣುಕು ಸಂಗ್ರಹಿಸಿಲ್ಲ. ಚಾಸಾ-1 ರವರು 15 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ಸಿಸಿಟಿವಿ ತುಣುಕುಗಳನ್ನು ನಾನು ಖುದ್ದಾಗಿ ಚಾಸಾ-1 ರವರ ಮನೆಗೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ. ಚಾಸಾ-1 ರವರು ನೀಡಲಾದ ಡಿವಿಡಿಯ ದೃಶ್ಯಾವಳಿಗಳು ನೈಜವಾಗಿವೇ ಇಲ್ಲವೇ ಎಂದು ಪರಿಶೀಲನೆ ಮಾಡಲು ತಜ್ಞರಿಗೆ ಕಳುಹಿಸಿಕೊಟ್ಟಿಲ್ಲ. ನಿಪಿ-3 ಡಿವಿಡಿಯನ್ನು ಚಾಸಾ-1 ಮತ್ತು 10 ರವರು ಈ ಪ್ರಕರಣದ ಸಲುವಾಗಿ ಸೃಷ್ಠಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-7 ರವರು ಹಲ್ಲನ್ನು ತಂದು ಹಾಜರುಪಡಿಸಿದ ಸಮಯದಲ್ಲಿ ಹಾಗೂ ಚಾಸಾ-8 ರವರು ರಕ್ತದ ಕಲೆಯಿರುವ ಬಟ್ಟೆಗಳನ್ನು ತಂದು ಹಾಜರುಪಡಿಸಿದ ಸಮಯದಲ್ಲಿ ಅಮಾನತ್ತು ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ.

2. ನಿಪಿ-2 ಮತ್ತು 5 ರ ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಗಳಿಗೆ ಚಾಸಾ-5 ಮತ್ತು 6 ರವರೇ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿ. ನಾವು ಈ ಪ್ರಕರಣದ ಸಲುವಾಗಿ ಹಲ್ಲನ್ನು ಮತ್ತು ಬಟ್ಟೆಗಳನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವೈದ್ಯರು ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ಹಲ್ಲಿನ ಬಗ್ಗೆ ಹೇಳಿರುವುದಿಲ್ಲ.

3. ಚಾಸಾ-1 ರವರು ವೈದ್ಯರ ಮುಂದೆ ಚಿಕಿತ್ಸೆಗಾಗಿ ದಾಖಲಾಗುವ ಸಮಯದಲ್ಲಿ ಮರದಿಂದ ಬಿದ್ದು ಪೆಟ್ಟಾಗಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-13 ರ ದಾಖಲೆಗಳಲ್ಲಿ ಮರದಿಂದ ಬಿದ್ದು ಚಿಕಿತ್ಸೆಗಾಗಿ ಬಂದಿರುವ ಬಗ್ಗೆ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಮರದ ಮೇಲಿಂದ ಬಿದ್ದು ಗಾಯಗೊಂಡು ಚಿಕಿತ್ಸೆ ಪಡೆದಿದ್ದರೂ ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕಾಗಿ ಅಕ್ಕ ಪಕ್ಕದ ನಿವಾಸಿಗಳ ಹೇಳಿಕೆಗಳನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ವಿರುದ್ದ ನಮ್ಮ ಠಾಣೆಯಲ್ಲಿ ಹಲವಾರು ಪ್ರಕರಣಗಳು ದಾಖಲಾಗಿವೆ ಎಂದರೆ ಇರಬಹುದು. ಆರೋಪಿ ಮತ್ತು ಚಾಸಾ-1 ರವರು ಅಣ್ಣ ತಮ್ಮ ಎಂದರೆ ಸರಿ. ಅವರಿಬ್ಬರ ನಡುವೆ ಜಮೀನು ವಿಚಾರವಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿ. ಜಮೀನಿನ ವಿಚಾರವಾಗಿ ಇರುವ ವೈಮನಸ್ಸಿನ ಹಿನ್ನೆಲೆಯಲ್ಲಿ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ಚಾಸಾ-1 ರವರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಮುಮಾ-2 ರಿಂದ 5 ಚಾಸಾ-1 ರವರಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಠಿಸಿದ್ದೇವೆ

ಎಂದರೆ ಸರಿಯಲ್ಲ. ಮುಮಾ–1 ಮರದ ದೊಣ್ಣೆಯನ್ನು ಚಾಸಾ–2 ರವರು ಈ ಪ್ರಕರಣದ ಸಲುವಾಗಿ ತಂದು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಚಾಸಾ–1 ಮತ್ತು 2 ರವರ ಮೇಲೆ ಎಂದಿಗೂ ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇದೆ**

**3 ನೇ ಪ್ರ.ದ.ನ್ಯಾ ದಂ. ಮೈಸೂರು.**